**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**

**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 290/2022

ಪಿಡಬ್ಲು :15 ಸಿಡಬ್ಲು :16

ಸಾಕ್ಷಿಯ ಹೆಸರು : ಶ್ರೀಮತಿ.ಚಂಪವ್ವ ಕರಜಗಿ

ಗಂಡನ ಹೆಸರು : ಶ್ರೀ.ಸಂಗಪ್ಪ ಕರಜಗಿ

ವಯಸ್ಸು : 52 ವರ್ಷ

ಉದ್ಯೋಗ : ಅಂಗನವಾಡಿ ಸಹಾಯಕರು

ವಾಸ್ತವ್ಯ : ಸುಟ್ಟಟ್ಟಿ ಗ್ರಾಮ, ತಾಲೂಕುಃ ಅಥಣಿ

ದಿನಾಂಕ : 13-03-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ನಮ್ಮ ಮನೆ ಜುಂಜರವಾಡ ರಸ್ತೆಯಲ್ಲಿದೆ. ಚಾಸಾಃ 1 ಸುನೀಲ ಮತ್ತು ಚಾಸಾಃ 8 ಸುರೇಶ ನನಗೆ ಗೊತ್ತಿರುತ್ತಾರೆ. 1 ಮತ್ತು 2 ನೇ ಆರೋಪಿತರು ನನಗೆ ಗೊತ್ತಿರುತ್ತಾರೆ.

2. 1 ಮತ್ತು 2 ನೇ ಆರೋಪಿತರು ಚಾಸಾಃ 8 ಸುರೇಶ ಅವರನ್ನು ಕರೆದುಕೊಂಡು ಹೋಗಿದ್ದನ್ನು ನಾನು ನೋಡಿರುವುದಿಲ್ಲ. ಆ ವಿಚಾರದಲ್ಲಿ ನಾನು ಪೋಲಿಸರಿಗೆ ಹೇಳಿರುವುದಿಲ್ಲ.

**(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ, ಸಾಕ್ಷಿಯ ಸಾಕ್ಷ್ಯವನ್ನು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು).**

**ಪಾಟೀ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದ**

ನಮ್ಮ ಮನೆಗೆ ಹೋಗುವ ರಸ್ತೆಯನ್ನು ಬನ್ನಿ ಮಂಟಪ್ಪಕ್ಕೆ ಹೋಗುವ ರಸ್ತೆ ಎಂದು ಕರೆಯುತ್ತಾರೆ ಎನ್ನುವುದು ಸರಿ.

2. " ದಿನಾಂಕಃ 04-09-2022 ರಂದು ಸಂಜೆ 6:00 ಗಂಟೆ ಸಮಯಕ್ಕೆ ನಾನು ನಮ್ಮ ಮನೆಯ ಮುಂದೆ ನಿಂತಿದ್ದಾಗ ನಮ್ಮೂರ ಸುರೇಶ ಗಾಡಿವಡ್ಡರ ಮತ್ತು ಸುನೀಲ ಗಾಡಿವಡ್ಡರ ಇಬ್ಬರೂ ರಸ್ತೆ ಮೇಲೆ ನಿಂತು ಮಾತನಾಡುತ್ತಿದ್ದರು ಎನ್ನುವುದು ಸರಿಯಲ್ಲ. ಆದರೆ ಅವರು ಆ ರಸ್ತೆಯಲ್ಲಿ ನಡೆದುಕೊಂಡು ಹೋದರು ಎಂದು ಹೇಳಿದ್ದಾರೆ. ಆ ಸಮಯದಲ್ಲಿ ನಮ್ಮೂರ ಮಲ್ಲಪ್ಪ ಮಾಳಿ ಮತ್ತು ಸುರೇಶ ಮಾಳಿ ಇವರಿಬ್ಬರು ಬಂದು ಮೋಟರಸೈಕಲ ನಿಲ್ಲಿಸಿ ಚಾಸಾಃ 8 ಸುರೇಶ ಗಾಡಿವಡ್ಡರ ಇವರನ್ನು ಮೋಟರಸೈಕಲ ಮೇಲೆ ಹತ್ತು ಎಂದರು, ಸುರೇಶ ಬರುವುದಿಲ್ಲ ಎಂದು ಹೇಳಿದರೂ ಅವನಿಗೆ ಹಿಡಿದುಕೊಂಡು ಮೋಟರಸೈಕಲ ಮೇಲೆ ಹಿಂದೆ ಒತ್ತಾಯದಿಂದ ಕೂಡಿಸಿಕೊಂಡು ಸುನೀಲ ಇವನು ಯಾಕೆ ಕರೆದುಕೊಂಡು ಹೋಗುತ್ತೀರಿ ಎಂದು ಕೇಳಿದಾಗ ಅವನಿಗೆ ಅವರು ಏನೂ ಹೇಳಲಿಲ್ಲ". ಎಂದು ನಾನು ಪೋಲಿಸರ ಮುಂದೆ ದಿನಾಂಕಃ 18-09-2022 ರಂದು ಹೇಳಿಕೆ ನೀಡಿದ್ದೇನೆ ಎನ್ನುವುದು ಸರಿಯಲ್ಲ. ಸಾಕ್ಷಿಯ ಹೇಳಿಕೆಯ ಭಾಗವನ್ನು ನಿಪಿ-26 ಎಂದು ಗುರುತಿಸಲಾಯಿತು.

3. ನಾನು ನಿಪಿ-26 ರಂತೆ ಹೇಳಿಕೆ ನೀಡಿದ್ದು ಸತ್ಯ ಇದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಪಾಟೀ ಸವಾಲು: ಆರೋಪಿತರ ಪರ ಶ್ರೀ. ಎಮ್.ಎಸ್.ಪಿ ವಕೀಲರಿಂದ**

ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.